ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಭೂನ್ಯಾಯ ಮಂಡಳಿಯ ಬಗ್ಗೆ

೧೨. ಶ್ರೀ ಬಿ. ರಮಾನಾಥ ರೈ. (ಬಂಟ್ವಾಳ).— ಮಾನ್ಯ ಕಂದಾಯ ಹಾಗೂ ಕಾರ್ಮಿಕ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಭೂ ನ್ಯಾಯ ಮಂಡಳಿಯ ಮೇಲ್ಮನವಿ ಪ್ರಾಧಿಕಾರಕ್ಕೆ ಸಲ್ಲಿಸಲಾದ ಒಟ್ಟು ಪ್ರಕರಣಗಳ ಸಂಖ್ಯೆ ಎಷ್ಟು ?

ಆ) ಅವುಗಳಲ್ಲಿ ಮೇಲ್ಮನವಿ ಪ್ರಾಧಿಕಾರ ತೀರ್ಮಾನ ಮಾಡಿದ ಪ್ರಕರಣಗಳ ಸಂಖ್ಯೆ ಎಷ್ಟು ?

ಇ) ಮೇಲ್ಮನವಿ ಪ್ರಾಧಿಕಾರದಲ್ಲಿ ತೀರ್ಮಾನವಾದ ಪ್ರಕರಣಗಳ ಪೈಕಿ ಭೂ ನ್ಯಾಯ ಮಂಡಳಿಯಿಂದ ಅಪೀಲು ಅರ್ಜಿ ಸಲ್ಲಿಸಿದ ನಂತರ ಗೇಣಿದಾರರ ಪರವಾಗಿ ಹಾಗೂ ಭೂ ಪಾಲೀಕರ ಪರವಾಗಿ ತೀರ್ಮಾನವಾಗಿರುವ ಪ್ರಕರಣಗಳ ಸಂಖ್ಯೆ ಎಷ್ಟು ?

ಈ) ನಂತರ ಮೇಲ್ಮನವಿ ಪ್ರಾಧಿಕಾರದಲ್ಲಿ ಗೇಣಿದಾರರ ಮತ್ತು ಭೂ ಪಾಲೀಕರ ಪರವಾಗಿ ತೀರ್ಮಾನವಾದ ಪ್ರಕರಣಗಳ ಸಂಖ್ಯೆ ಎಷ್ಟು ?

ಶ್ರೀ ಕೆ. ಹೆಚ್. ಪಾಟೀಲ್ (ಕಂದಾಯ ಹಾಗೂ ಕಾರ್ಮಿಕ ಮಂತ್ರಿಗಳು).—

ಅ) ೬೯೧.

ಆ) ೨೫೯.

ಇ) ಭೂ ನ್ಯಾಯ ಮಂಡಳಿಯ ಪತಿಯಿಂದ ಯಾವುದೇ ಅಪೀಲು ಸಲ್ಲಿಸಿರುವುದಿಲ್ಲ. ಸಂಬಂಧಪಟ್ಟ ವ್ಯಕ್ತಿಗಳು ಮೇಲ್ಮನವಿಗಳನ್ನು ಸಲ್ಲಿಸಿರುತ್ತಾರೆ ಮತ್ತು ಕೆಲವು ಪ್ರಕರಣಗಳು ಕರ್ನಾಟಕ ಉಚ್ಚ ನ್ಯಾಯಾಲಯದಿಂದ ವರ್ಗವಾಗಿವೆ. ಕಾರಣ ಭೂ ನ್ಯಾಯ ಮಂಡಳಿಗಳಿಂದ ಸಲ್ಲಿಸಿದ ಮೇಲ್ಮನವಿಗಳ ಮತ್ತು ತೀರ್ಮಾನಗಳ ವಿವರಗಳಿರುವುದಿಲ್ಲ.

ಈ) ಅ) ಗೇಣಿದಾರರ ಪರವಾಗಿ ೧೦೧೩

ಆ) ಭೂ ಪಾಲೀಕರ ಪರವಾಗಿ ೭೮೧

ಇ) ಇತರ ರೀತಿಯಲ್ಲಿ ತಿರಸ್ಕೃತ ೭೦೫